# ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ- ಕರ್ನಾಟಕ

ಮೋ.ನಂ.9742663453, 9480064312

ಗೆ.

**ಮಾನ್ಯ ಗೋಪಾಲ್‌ನಾಯಕ** ದಿನಾಂಕ-೧೧/೧೧/೨೦೨೦

**ದೇವದಾಸಿ ಪುನರ್ವಸತಿ ಯೋಜನಾಧಿಕಾರಿಗಳು**

**ಮೇಲ್ವಿಚಾರಕರು ಕೊಪ್ಪಳ,ರಾಯಚೂರು,ಬಳ್ಳಾರಿ**

ಮಾನ್ಯರೇ,

**ವಿಷಯ: ವಿಮುಕ್ತ ದೇವದಾಸಿ ತಾಯಂದಿರ ಮತ್ತು ಮಕ್ಕಳ ವಿವಿಧ ಹಕ್ಕೋತ್ತಾಯಗಳನ್ನು (ಬೇಡಿಕೆಗಳು) ಈಡೇರಿಸಲು ಮನವಿ.**

ಈ ಮೇಲಿನ ವಿಷಯಕ್ಕೆ ಸಂಬಂಧಸಿದಂತೆ, ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಕರ್ನಾಟಕರಾಜ್ಯ ಸಮಿತಿ ಹಾಗೂ ಸಖಿ ಸಂಸ್ಥೆ ಕರ್ನಾಟಕ ದೇವದಾಸಿ ಹೆಲ್ಪ್‌ಡೆಸ್ಕ್ ಹೊಸಪೇಟೆ ಮತು್ತರಾಷ್ಟ್ರೀಯ ಕಾನೂನು ಶಾಲೆಯ ತಳ ಸಮುದಾಯಗಳ ಅಧ್ಯಯನಕೇಂದ್ರಬೆಂಗಳೂರು ಇವರುಗಳ ಸಹಯೋಗದಲ್ಲಿ ೧೪ ಜಿಲ್ಲೆಗಳಲ್ಲಿ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆಯು ವಿವಿಧ ಜಿಲ್ಲೆಗಳಲ್ಲಿ ಸಮಾಲೋಚನ ಸಭೆಗಳನ್ನು ಆಯೋಜಿಸಿ ದೇವದಾಸಿ ತಾಯಂದಿರ ಮತ್ತು ಮಕ್ಕಳ ಸಮಗ್ರಪುನರ್ವಸತಿಯಾಗಬೇಕುಎನ್ನುವ ಹಿನ್ನಲೆಯಲ್ಲಿ ಪ್ರತಿಯೊಂದುಜಿಲ್ಲೆಯ ದೇವದಾಸಿ ತಾಯಂದಿರ ಮಕ್ಕಳ ಅನಿಸಿಕೆಯಾಗಿರುವದರಿಂದ ದಿನಾಂಕ ೦೭-೧೧-೨೦೨೦ ರಂದು ಹೊಸಪೇಟಯಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿರಾಜ್ಯ ಮಟ್ಟದ ಸಮಾಲೋಚನಾ ಸಭೆಯನ್ನು ಹಮ್ಮಿಕೊಂಡುರಾಜ್ಯದ ವಿವಿಧ ಜಿಲ್ಲೆಗಳಿಂದ ದೇವದಾಸಿ ಮಹಿಳೆಯರು ಮತ್ತು ಮಕ್ಕಳು ಭಾಗವಹಿಸಿ ಸಮಸ್ಯೆಗಳು ಮತ್ತು ಪರಿಹಾರಗಳ ಬಗ್ಗೆ ಚರ್ಚಿಸಿ ಈ ಕೆಳಗಿನ ಹಕ್ಕೋತ್ತಾಯಗಳನ್ನು (ಬೇಡಿಕೆಗಳು) ಮಂಡಿಸಿರುತ್ತಾರೆ. ದಯವಿಟ್ಟು ತಾವುಗಳು ಈ ಕೆಳಗಿನ ಹಕ್ಕೋತ್ತಾಯಗಳನ್ನು (ಬೇಡಿಕೆಗಳು) ಪರಿಗಣಿಸಿ ಅನುಷ್ಠಾನಕ್ಕೆ ತರಲು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಈ ಮೂಲಕ ಮನವಿ ಮಾಡಿಕೊಳ್ಳುತ್ತೇವೆ.

ವಂದನೆಗಳೊಂದಿಗೆ,

ಇಂತಿ ತಮ್ಮ

ವೇದಿಕೆಯ ಪರವಾಗಿ

ಶ್ರೀ ಯಮನೂರಪ್ಪ ಕೊಪ್ಪಳ, ಶ್ರೀ ಮತಿ ಮಂಜುಳಾ ಮಾಳ್ಗಿ

ರಾಜ್ಯ ಸಂಯೋಜಕರು

ವಿಮುಕ್ತ ದೇವದಾಸಿ ಮಹಿಳಾ ಮತ್ತು ಮಕ್ಕಳ ವೇದಿಕೆ ಕರ್ನಾಟಕ

ಪ್ರತಿಗಳು

ಮಾನ್ಯ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು

ಮಾನ್ಯ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಾನ್ಯ ಉಪನಿರ್ದೇಶಕರು ಸಮಾಜಕಲ್ಯಾನ ಅಧಿಕಾರಿಗಳು

ಮಾನ್ಯ ದೇವದಾಸಿ ಪುನರ್ವಸತಿ ಯೋಜನಾಧಿಕಾರಿಗಳು ಕೊಪ್ಪಳ, ಬಳ್ಳಾರಿ, ರಾಯಚೂರು.

**ಬೇಡಿಕೆಗಳ ಪಟ್ಟಿಯನ್ನು ಈ ಪತ್ರಕ್ಕೆ ಲಗತ್ತಿಸಲಾಗಿದೆ**

**ಬೇಡಿಕೆಗಳು:**

1. ದೇವದಾಸಿ ಕುಟುಂಬಗಳಲ್ಲಿ ಶೇ.55ರಷ್ಟು ಜನರಿಗೆ ಯಾವುದೇ ರೀತಿಯಾದ ವಸತಿ ಸೌಲಭ್ಯಗಳಿಲ್ಲದೇ ಇರುವುದು ವಾಸ್ತವ. ಆದ್ದರಿಂದ ವಸತಿರಹಿತ ಎಲ್ಲಾ ದೇವದಾಸಿ ತಾಯಂದಿರಿಗೆ ವಸತಿ ವ್ಯವಸ್ಥೆಯನ್ನುಆಧ್ಯತೆಯ ಮೇರೆಗೆ ನೀಡಬೇಕು. ಅದಕ್ಕಾಗಿ ವಿಶೇಷವಾದ ಪ್ಯಾಕೇಜ್ರೂಪಿಸಬೇಕು.
2. ಶಿಕ್ಷಣ ಪಡೆಯುತ್ತಿರುವಎಲ್ಲ ದೇವದಾಸಿ ತಾಯಂದಿರು ಮಕ್ಕಳಿಗೆ ವಿಶೇಷವಾದಂತಹ ವಿದ್ಯಾರ್ಥಿವೇತನವನ್ನು ನಿಗದಿಗೊಳಿಸಬೇಕು ಸಮರ್ಪಕವಾಗಿ ಜಾರಿಗೊಳಿಸಬೇಕು
3. ದೇವದಾಸಿ ಕುಟುಂಬಗಳಲ್ಲಿ ಶೇ.45ರಷ್ಟು ಜನರಿಗೆಯಾವುದೇರೀತಿಯಾದಂತಹ ನಿವೇಶನ ಸೌಲಭ್ಯಗಳಿಲ್ಲದೇ ಇರುವುದು ವಾಸ್ತವ. ಆದ್ದರೊಂದ ನಿವೇಶನ ರಹಿತಎಲ್ಲಾ ದೇವದಾಸಿ ತಾಯಂದಿರಿಗೆ ನಿವೇಶನ ನೀಡಿ, ಮನೆಗಳ ನಿರ್ಮಾಣವನ್ನುಆಧ್ಯತೆಯ ಮೇರೆಗೆ ನೀಡಬೇಕು. ಅದಕ್ಕಾಗಿ ವಿಶೇಷವಾದ ಪ್ಯಾಕೇಜ್ ರೂಪಿಸಬೇಕು.
4. ದೇವದಾಸಿ ತಾಯಂದಿರು ಮತ್ತು ಮಕ್ಕಳಿಗೆ ಕೌಶಲ್ಯತರಬೇತಿ ನೀಡಿ ಅವರಿಗೆ ಸ್ವಯಂ ಉದ್ಯಮಗಳನ್ನು ಆರಂಭಿಸಲು ಯೋಜನೆಯನ್ನು ರೂಪಿಸಬೇಕು. ಪ್ರೋತ್ಸಾಹಧನವನ್ನು ನೀಡಬೇಕು.
5. ದೇವದಾಸಿತಾಯಂದಿರ ಕುಟುಂಬದ ಎಲ್ಲಾ ಸದಸ್ಯರಿಗೂ ಆಗುವಷ್ಟು ಮಾಸ್ಕ್, ಗ್ಲೌಸ್, ಸಾನಿಟೈಸರ್, ಸೋಪು ಮುಂತಾದ ಪ್ರಾಥಮಿಕ ಆರೋಗ್ಯ ಸಲಕರಣೆಗಳನ್ನು ನೀಡಬೇಕು.
6. ದೇವದಾಸಿ ತಾಯಂದಿರಿಗೆ ಸರ್ಕಾರ ಈಗ ನೀಡುತ್ತಿರುವ ಮಾಸಾಶನ ರೂ.1500/–ಗಳಿಂದ ರೂ.5000/–ಗಳಿಗೆ ಹೆಚ್ಚಿಸಬೇಕು.
7. ದೇವದಾಸಿ ಪದ್ಧತಿಗೆ ಒಳಗಾಗಿರುವ ತಾಯಂದಿರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿಇರುವಂತಹ ಜಾತಿಗಳಿಗೆ ಸೇರಿರುವ ಮಹಿಳೆಯರೇ ಹೆಚ್ಚಾಗಿ ಕಂಡುಬರುತ್ತಾರೆ ಅದರಲ್ಲಿ ಕೆಲವರು 'ಒಬಿಸಿ' ಸಮುದಾಯಗಳಿಗೆ ಸೇರಿರುವ ಮಹಿಳೆಯರು ಇದ್ದಾರೆ ಅವರು ಮಕ್ಕಳಿಗೆ ಮದುವೆ ಪ್ರೋತ್ಸಾಹಧನ ದೊರೆಯುವುದಿಲ್ಲ ಅಂಬೇಡ್ಕರ್ಅಭಿವೃದ್ಧಿ ನಿಗಮದಿಂದ ಯೋಜನೆಜಾರಿಯಾಗುತ್ತಿದೆ,ಆದರೆ ಅವರು ದೇವರಾಜ್ಅರಸುಅಭಿವೃದ್ಧಿ ನಿಗಮದ ಅಡಿಯಲ್ಲಿ ಅವರ ಜಾತಿಗಳು ಬರುವುದರಿಂದ ಅಭಿವೃದ್ಧಿ ನಿಗಮದಲ್ಲಿ ಯೋಜನೆಯನ್ನು ಜಾರಿಗೊಳಿಸಬೇಕೆಂದು ಕೋರುತ್ತೇವೆ ಒಟ್ಟಾರೆ ಈ ಯೋಜನೆ ಸಮಗ್ರವಾಗಿ ರೂಪುಗೊಂಡು ಒಂದೆ ರೀತಿಯಲ್ಲಿ ಜಾರಿಯಾಗಬೇಕು.
8. ದೇವದಾಸಿ ತಾಯಂದಿರು ಶೇಕಡ 85 ರಷ್ಟು ಜನ ಅನಕ್ಷರಸ್ಥರು ಅವರುಗಳಿಗೆ ಸರಿಯಾಗಿ ಯೋಜನೆಗಳ ಬಗ್ಗೆ ಮಾಹಿತಿ ಇರುವುದಿಲ್ಲ ಸಮರ್ಪಕವಾದ ಮಾಹಿತಿಯನ್ನು ತಾಯಂದಿರಿಗೆ ನೀಡಬೇಕು ಮತ್ತು ಅವರಿಗೆ ನೀಡುತ್ತಿರುವಂತಹ ಸ್ವಯಂಉದ್ಯೋಗ ಯೋಜನೆಗಳ ಮೊತ್ತವನ್ನು 10 ಲಕ್ಷದವರೆಗೆ ಹೆಚ್ಚಿಸಬೇಕು
9. ಕೇಂದ್ರ ಸರ್ಕಾರದ ನೆರವಿನೊಂದಿಗೆ ದೇವದಾಸಿ ತಾಯಂದಿರು ಮತ್ತು ಮಕ್ಕಳಿಗೆ ಸ್ವಯಂ ಉದ್ಯೋಗ ನೀಡಲು ರಾಯಚೂರು ಮತ್ತು ಬೆಳಗಾವಿಯಲ್ಲಿ ಕೇಂದ್ರಗಳನ್ನು ಪ್ರಾರಂಭಿಸಲು ಪ್ರಕ್ರಿಯೆ ಹೀಗಾಗಲೆ ಜಾರಿಯಲ್ಲಿದ್ದು ಕೂಡಲೇ ಅನುಷ್ಠಾನಕ್ಕೆ ಬರಬೇಕು.
10. ದೇವದಾಸಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಪ್ರತ್ಯೇಕ ನಿಗಮವನ್ನು ಹೈದರಬಾದ್ ಕರ್ನಾಟಕದ ಜಿಲ್ಲೆಗಳಲ್ಲಿ ಸ್ಥಾಪಿಸಬೇಕು.
11. ದೇವದಾಸಿ ಪುನರ್ವಸತಿಯೋಜನೆಯಲ್ಲಿ ಇರುವ ವಿವಿಧ ಸೌಲಭ್ಯಗಳ ಮಾಹಿತಿಗಾಗಿ ಕರಪತ್ರ (ಹ್ಯಾಂಡ್ ಬಿಲ್) ತಯಾರಿಸುವಂತೆ ಸರ್ಕಾರ ಕ್ರಮಕೈಗೊಳ್ಳಬೇಕು
12. ದೇವದಾಸಿ ಪುನರ್ವಸತಿ ಯೋಜನೆಯಲ್ಲಿ ಕೆಲಸ ನಿರ್ವಹಿಸುವ ಸಿಬ್ಬಂದಿಗಳನ್ನು ದೇವದಾಸಿ ಮಕ್ಕಳಿಗೆ ಆಧ್ಯತೆಯ ಮೂಲಕ ನೇಮಕ ಮಾಡಿಕೊಳ್ಳಬೇಕು
13. ದೇವದಾಸಿ ಮಕ್ಕಳಿಗಾಗಿ ಶಿಕ್ಷಣ.ಉದ್ಯೋಗಕ್ಕಾಗಿ ವಿಶೇಷ ಕೋಚಿಂಗ್ ಮಾರುಕಟ್ಟೆಯನ್ನೊಳಗೊಂಡ ತರಬೇತಿ, ಸಮಗ್ರವಾಗಿಆರ್ಥಿಕವಾಗಿ ಸಬಲರಾಗಲಿಕ್ಕೆ ಸಾಲ ಸೌಲಭ್ಯಗಳನ್ನು ಆಪ್ತಸಮಾಲೋಚನೆ ಮಾಡುವ ಯೋಜನೆಗಳು ರೂಪುಗೊಂಡು ಜಾರಿಯಾಗಬೇಕು.
14. ಮರಣಹೊಂದಿದ ದೇವದಾಸಿ ತಾಯಂದಿರ ಮಕ್ಕಳಿಗೆ ದೃಡೀಕರಣ ಪತ್ರವನ್ನು ಸರ್ಕಾರ ನೀಡಬೇಕು.
15. **ಸಮಿತಿಗಳ ರಚನೆಯಾಗಬೇಕು**
    - ಮೇಲ್ವಿಚಾರಣೆ ಮತ್ತು ಅನುಷ್ಠಾನಕ್ಕಾಗಿ ತಾಲೂಕು ಸಮಿತಿ
    - ಮೇಲ್ವಿಚಾರಣೆ ಮತ್ತು ಅನುಷ್ಠಾನಕ್ಕಾಗಿ ಜಿಲ್ಲಾ ಸಮಿತಿ
    - ಮೇಲ್ವಿಚಾರಣೆ ಮತ್ತು ಅನುಷ್ಠಾನಕ್ಕಾಗಿ ರಾಜ್ಯ ಸಮಿತಿ ಸಮಿತಿ
16. ಈಗಾಗಲೇ ರಾಜ್ಯ ಸರ್ಕಾರದಲ್ಲಿಅನುಮೋದನೆಯಾಗಿರುವ ದೇವದಾಸಿ ತಾಯಂದಿರ ಕುಟುಂಬಗಳ ಸಮಗ್ರ ಸಮೀಕ್ಷೆಯನ್ನುತಕ್ಷಣ ಪ್ರಾರಂಭಿಸಬೇಕುಅವರ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡು ಸಮಗ್ರವಾದಕುಟುಂಬದ ಪುನರ್ವಸತಿಗೆ ಯೋಜನೆಗಳನ್ನು ರೂಪಿಸಬೇಕು

17. ಕೇಂದ್ರ ಸರ್ಕಾರ ಕೇಂದ್ರ ಸರ್ಕಾರದ ನೆರವಿನೊಂದಿಗೆ ದೇವದಾಸಿ ತಾಯಂದಿರು ಮತ್ತು ಮಕ್ಕಳಿಗೆ ಸ್ವಯಂ ಉದ್ಯೋಗ ತರಬೇತಿ ನೀಡಲು ರಾಯಚೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ಕೇಂದ್ರಗಳನ್ನು ಪ್ರಾರಂಭಿಸಲು ಈಗಾಗಲೇ ಪ್ರಕ್ರಿಯೆಜಾರಿಯಲ್ಲಿದ್ದು ಪೂರ್ಣಗೊಳಿಸಬೇಕು ಅದರೊಂದಿಗೆ ವಯೋವೃದ್ಧ ದೇವದಾಸಿ ತಾಯಂದಿರಿಗೆ ಮಕ್ಕಳಿಲ್ಲದೆ ಇದ್ದರೆಅವರನ್ನು ನೋಡಿಕೊಳ್ಳಲು ಕೇಂದ್ರ ಸ್ಥಾಪನೆಯಾಗಬೇಕುಅದರಲ್ಲಿಯೇ ಪೋಷಕರಿಲ್ಲದಅನಾಥವಾಗಿರುವಅಂತಹ ದೇವದಾಸಿ ಮಕ್ಕಳನ್ನು ವಸತಿಸಹಿತ ಶಿಕ್ಷಣ ನೀಡಲು ಸೂಕ್ತವಾದಕ್ರಮವನ್ನು ಕೈಗೊಳ್ಳಬೇಕು
18. 20 ವರ್ಷಗಳ ಹಿಂದೆ ಬೇರೆ ಬೇರೆ ಯೋಜನೆಗಳಲ್ಲಿ 40 ಸಾವಿರ ರೂಗಳಿಗೆ ದೇವದಾಸಿ ತಾಯಂದಿರು ಮನೆ ನಿರ್ಮಿಸಿಕೊಂಡಿದ್ದಾರೆ ಯೋಜನೆಯ ಸೌಲಭ್ಯವನ್ನು ಪಡೆದುಕೊಂಡಿದ್ದಾರೆಆದರೆ ಈಗ ಮನೆಗಳು ಬಿದ್ದು ಹೋಗುವ ಸ್ಥಿತಿಯಲ್ಲಿವೆ ಆದ್ದರಿಂದಅವರಿಗೆ ಮತ್ತೊಮ್ಮೆ ಮನೆ ನೀಡಲುಯೋಜನೆಯನ್ನುರೂಪಿಸಬೇಕು ಊರಿಗೆತಾವೇ ಮನೆ ನಿರ್ಮಿಸಿ ಕೊಳ್ಳುವಷ್ಟು ಸಾಮರ್ಥ್ಯವಿಲ್ಲದೆಇರುವುದರಿಂದಅವರನ್ನು ಪರಿಗಣಿಸಿ ಅವರಿಗೆ ಸೂಕ್ತವಾದ ಮನೆ ನಿರ್ಮಿಸಿಕೊಡಬೇಕು
19. ದೇವದಾಸಿ ತಾಯಂದಿರು ಮಕ್ಕಳು ಅರ್ಧದಲ್ಲೇ ಶಾಲೆ ಮತ್ತು ಕಾಲೇಜುಗಳನ್ನು ಬಿಡುತ್ತಿದ್ದಾರೆಏಕೆಂದರೆಅವರತಾಯಂದಿರಿಗೆದುಡಿಯಲು ಸಾಧ್ಯವಾಗದೆಇರುವಂತಹ ಕುಟುಂಬಗಳಲ್ಲಿ ಮಕ್ಕಳು ಅನಿವಾರ್ಯವಾಗಿದುಡಿಯಬೇಕಾದಅಂತಹ ವಾತಾವರಣರೂಪಗೊಂಡಿದೆತಾಯಂದಿರಿಗೆಆರೋಗ್ಯದ ಸಮಸ್ಯೆಗಳು ಎದುರಾಗಿರುವ ಸಂದರ್ಭದಲ್ಲಿ ಈ ರೀತಿಯಾದಂತಹ ಸಮಸ್ಯೆಗಳು ಎದುರಾಗುತ್ತಿವೆ ಮನೆ ನಿರ್ವಹಣೆಮಾಡಲು ಮಕ್ಕಳು ದುಡಿಯಬೇಕಾದ ಅನಿವಾರ್ಯತೆಇದೆಆದ್ದರಿಂದಇದಕ್ಕೆ ಪರಿಹಾರ ಒದಗಿಸಿ ಕೊಡಬೇಕು
20. ದೇವದಾಸಿ ಕುಟುಂಬಗಳಲ್ಲಿ ಶೇ.75ರಷ್ಟು ಜನರಿಗೆಯಾವು ದೇರೀತಿಯಾದ ಭೂಒಡೆತನವಿಲ್ಲ. ಆದ್ದರಿಂದ ಭೂರಹಿತಎಲ್ಲಾ ದೇವದಾಸಿ ತಾಯಂದಿರಿಗೆ 2 ಎಕರೆ ಭೂಮಿಯನ್ನುಆದ್ಯತೆಯ ಮೇರೆಗೆ ನೀಡಬೇಕು. ಅದಕ್ಕಾಗಿ ವಿಶೇಷವಾದ ಪ್ಯಾಕೇಜ್‌ರೂಪಿಸಬೇಕು.
21. ದೇವದಾಸಿ ವಿದ್ಯಾವಂತ ಮಕ್ಕಳಿಗೆ ಸರ್ಕಾರದ ವಿವಿಧ ಇಲಖೆಗಳು ಮತ್ತು ಯೋಜನೆಗಳನ್ನು ಆಧ್ಯತೆಯ ಮೇರೆಗೆ ಪರಿಗಣಿಸುವಂತೆ ಸರ್ಕಾರಿಆದೇಶವಾಗಬೇಕು.
22. ದೇವದಾಸಿ ಪದ್ಧತಿ ನಿಷೇಧಕಾಯಿದೆಯನ್ನು ಮರುಪರುಶೀಲಿಸಿ ಸಮಗ್ರವಾದರಾಷ್ಟ್ರೀಯ ನೀತಿ ಮತ್ತು ಕಾಯ್ದೆ ರೂಪಿಸಬೇಕು ಹಾಗೂ ಅದರ ಅನುಷ್ಠಾನಕ್ಕೆ ನಿಯಮಗಳನ್ನು ರೂಪಿಸಿ ಅದರ ಸಮರ್ಪಕ ಅನುಷ್ಠಾನಕ್ಕೆ ಕ್ರಮವಹಿಸಬೇಕು.
23. ದೇವದಾಸಿ ತಾಯಂದಿರು ಮತ್ತು ಮಕ್ಕಳಲ್ಲಿ ಅನಾರೋಗ್ಯಕ್ಕೆ ಒಳಗಾಗಿರುವವರು ಹೆಚ್ಚಾಗಿ ಕಂಡುಬರುತ್ತಾರೆ. ಆದ್ದರಿಂದ ಈ ಕುಟುಂಬಗಳಿಗೆ ಪ್ರತ್ಯೇಕವಾದಆರೋಗ್ಯಯೋಜನೆಯನ್ನು ರೂಪಿಸಿ ಅವರಿಗೆಎಲ್ಲಾರೀತಿಯ ಚಿಕಿತ್ಸೆಗಳನ್ನು ಉಚಿತವಾಗಿ ಪಡೆದುಕೊಳ್ಳಲು ವಿಶೇಷವಾದಆರೋಗ್ಯಚೀಟಿಯನ್ನು ನೀಡಬೇಕು.(ಹೆಲ್ತ ಕಾರ್ಡ್)
24. ದೇವದಾಸಿ ಅನಿಷ್ಟ ಪದ್ಧತಿಯ ವಿರುದ್ಧಜಾಗೃತಿ ಮೂಡಿಸಿ ಈ ಪದ್ಧತಿಯ ಸಂಪೂರ್ಣ ನಿಷೇಧಕ್ಕೆಜನಾಭಿಪ್ರಾಯವನ್ನುರೂಪಿಸಬೇಕು.
25. ದೇವದಾಸಿತಾಯಂದಿರ ಮತ್ತು ಮಕ್ಕಳ ನಿರ್ದಿಷ್ಟ ಸಂಖ್ಯೆ ಮತ್ತು ಶಿಕ್ಷಣ, ಉದ್ಯೋಗ, ಆರೋಗ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸರ್ಕಾರ ಸಮೀಕ್ಷೆ ಕೈಗೊಳ್ಳಬೇಕು.
26. ದೇವದಾಸಿತಾಯಂದಿರ ಮತ್ತು ಮಕ್ಕಳ ಶಿಕ್ಷಣ, ಆರೋಗ್ಯ, ಉದ್ಯೋಗಇತರೆ ಮೀಸಲಾತಿಗಳಲ್ಲಿ ವಿಶೇಷ ಮೀಸಲಾತಿಯನ್ನುಕೊಡಬೇಕು. (ದೇವದಾಸಿ ತಾಯಂದಿರು ಮತ್ತು ಮಕ್ಕಳಿಗಾಗಿಯೇ)
27. 1993,2007 ಮತ್ತು 2008ರಲ್ಲಿ ಕರ್ನಾಟಕ ಸರ್ಕಾರಕೈಗೊಂಡಿರುವ ದೇವದಾಸಿ ತಾಯಂದಿರ ಸಮೀಕ್ಷೆಯಲ್ಲಿ ಅನೇಕ ದೇವದಾಸಿ ತಾಯಂದಿರು ಸೇರ್ಪಡೆಯಾಗಿಲ್ಲಆದ್ದರಿಂದ ಮತ್ತೊಮ್ಮೆ ಸಮಗ್ರವಾದ ದೇವದಾಸಿ ತಾಯಂದಿರ ಸಮೀಕ್ಷೆಯನ್ನು ಕೈಗೊಳ್ಳಬೇಕು ಹಾಗೂ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಷೇಧಿಸಲುಕ್ರಮವಹಿಸಬೇಕು ಗುರುತಿಸಲ್ಪಡುವ ದೇವದಾಸಿಯರಿಗೆ ಸಮಗ್ರ ವಾದಂತಹ ಪುನರ್ವಸತಿಯೋಜನೆಯನ್ನು ರೂಪಿಸಿ ಅವರನ್ನು ಮುಖ್ಯವಾಹಿನಿ ಅಭಿವೃದ್ಧಿಯೊಂದಿಗೆಜೋಡಿಸಬೇಕು
28. ದೇವದಾಸಿ ತಾಯಂದಿರ ಸಂಪೂರ್ಣಕುಟುಂಬಕ್ಕೆ ಪುನರ್ವಸತಿಯನ್ನುಒದಗಿಸಬೇಕು ಶಿಕ್ಷಣ ಉದ್ಯೋಗಆರೋಗ್ಯ ವಾಸಿಸಲು ಮನೆ ಮುಂತಾದ ಮೂಲಭೂತ ಸೌಲಭ್ಯಗಳನ್ನು ನೀಡಬೇಕು
29. ಕೋವಿಡ್–19 ದಿಗ್ಬಂಧನ ಸಂದರ್ಭದಲ್ಲಿ ದೇವದಾಸಿ ತಾಯಂದಿರು ಮತ್ತು ಮಕ್ಕಳಿಗೆ ಆರೋಗ್ಯಕುರಿತುಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕು.
30. ತಾಯಿಂದಿರಿಗೆ ನಿಗದಿಯಾಗಿರುವ ಕೆಲವು ಸೌಲಭ್ಯಗಳನ್ನು ಪಡೆದುಕೊಳ್ಳಲು ದೇವದಾಸಿ ತಾಯಂದಿರು ಮಧ್ಯವರ್ತಿಗಳ ಮೇಲೆ ಅವಲಂಬಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ ಕೆಲವು ಸಂಘಟನೆಗಳು ಮತ್ತು ಸಮುದಾಯದ ಮುಖಂಡರುಗಳು ಸೌಲಭ್ಯಗಳನ್ನು ನೀಡಲು ದೇವದಾಸಿಯರಿಂದ ಪಡೆಯುತ್ತಿರುವುದುಎಲ್ಲ ಜಿಲ್ಲೆಗಳಲ್ಲೂ ಕಂಡುಬರುತ್ತಿದೆಆದ್ದರಿಂದ ಉದಾಸಿ ದೇವದಾಸಿ ತಾಯಂದಿರಿಗೆಇರುವ ಯೋಜನೆಗಳನ್ನು ನೇರವಾಗಿತಲುಪಿಸಬೇಕು ಯಾವುದೇರೀತಿಯಾದಂತಹ ಮಧ್ಯವರ್ತಿಗಳ ಪ್ರವೇಶವನ್ನು ಪ್ರೋತ್ಸಾಹಿಸಬಾರದುಜಾರಿಯಲ್ಲಿರುವ ಪದ್ಧತಿಯನ್ನು ತನಿಖೆಗೊಳಪಡಿಸಬೇಕು ಅರ್ಹತೆಇರುವಎಲ್ಲಾ ದೇವದಾಸಿ ತಾಯಂದಿರಿಗೆ ಸೌಲಭ್ಯಗಳನ್ನು ನೀಡಬೇಕು

31. ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಂಘಟನೆಗಳು ಒಟ್ಟಾಗಿ ಸಂಪೂರ್ಣ ದೇವದಾಸಿ ಪದ್ಧತಿ ನಿಷೇಧ ಮತ್ತು ಪುನರ್ವಸತಿಗಾಗಿ ಕೆಲಸ ಮಾಡಬೇಕು
32. ಸರ್ಕಾರದಲ್ಲಿ ಅಸ್ತಿತ್ವದಲ್ಲಿರುವ ಪುನರ್ವಸತಿಯೋಜನೆಯಲ್ಲಿಎಲ್ಲ ದೇವದಾಸಿ ತಾಯಂದಿರಿಗೂ ಸಮರ್ಪಕವಾಗಿ ಸೌಲಭ್ಯಗಳನ್ನು ನೀಡಲು ಹಣಕಾಸಿನ ಸಮಸ್ಯೆಕಾಡುತ್ತಿದೆಆದ್ದರಿಂದ ದೇವದಾಸಿ ತಾಯಂದಿರು ಮತ್ತು ಮಕ್ಕಳ ಸಮಗ್ರಅಭಿವೃದ್ಧಿಗಾಗಿ ದೇವದಾಸಿ ತಾಯಂದಿರಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ಕಾಲಮಿತಿಯಲ್ಲಿಎಲ್ಲ ದೇವದಾಸಿ ತಾಯಂದಿರಿಗೆ ಸೌಲಭ್ಯಗಳನ್ನು ಒದಗಿಸಿ ಸಮಗ್ರಅಭಿವೃದ್ಧಿಗೆ ಪ್ರಯತ್ನಿಸಬೇಕು
33. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿಅತ್ಯಂತ ಹಿಂದುಳಿದ ಸಮುದಾಯವಾಗಿರುವ ದೇವದಾಸಿ ತಾಯಂದಿರಿಗೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪ ಯೋಜನೆಯ ಹಣವನ್ನು ಮೀಸಲಿಟ್ಟುಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಬೇಕು

**ದೀರ್ಘಕಾಲಿಕ ಬೇಡಿಕೆಗಳು:**

1. ದೇವದಾಸಿತಾಯಂದಿರ ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿಅವರನ್ನು ವಿವಿಧ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಬೇಕು. ಸ್ವಯಂಉದ್ಯೋಗದಲ್ಲಿ ಆಸಕ್ತಿ ಇರುವಯುವಕ–ಯುವತಿಯರಿಗೆ ಸ್ವಯಂಉದ್ಯೋಗತರಬೇತಿ ನೀಡಿ ಪ್ರೋತ್ಸಾಹಧನ ನೀಡುವುದರ ಮೂಲಕ ಉದ್ಯೋಗವನ್ನು ಪ್ರಾರಂಭಿಸಲುಕ್ರಮವಹಿಸಬೇಕು.
2. ದೇವದಾಸಿತಾಯಂದಿರ ಕುಟುಂಬಗಳಿಗೆ ಆದ್ಯತೆಯ ಮೇಲೆ ಭೂಮಿಯನ್ನು ನೀಡುವಯೋಜನೆಯನ್ನು ಶೀಘ್ರಗತಿಯಲ್ಲಿ ಜಾರಿಗೊಳಿಸಬೇಕು.
3. ಭೂಮಿ ಹೊಂದಿರುವಎಲ್ಲಾ ದೇವದಾಸಿ ತಾಯಂದಿರಿಗೆ 'ಗಂಗಾ ಕಲ್ಯಾಣ' ಯೋಜನೆಯಡಿಯಲ್ಲಿ ಕೊಳವೆ ಬಾವಿಗಳನ್ನು ನಿರ್ಮಿಸಿ ಅದಕ್ಕೆ ಪೂರಕವಾದಂತಹ ಯಂತ್ರೋಪಕರಣಗಳನ್ನು ಅಳವಡಿಸಿಕೊಳ್ಳಬೇಕು.
4. ದೇವದಾಸಿತಾಯಂದಿರಎಲ್ಲ ಕುಟುಂಬಗಳಿಗೆ ಸಮಗ್ರವಾದಆರೋಗ್ಯಯೋಜನೆಯನ್ನು ರೂಪಿಸಿ, ವಿಶೇಷಆರೋಗ್ಯಚೀಟಿಯನ್ನು ನೀಡಬೇಕು. ಮತ್ತುಉಚಿತವಾಗಿ ವೈದ್ಯಕೀಯ ಸೌಲಭ್ಯಗಳನ್ನು ಎಲ್ಲ ಅಂಶಗಳನ್ನು ನೀಡಬೇಕು.
5. ಕೋವಿಡ್–19 ದಿಗ್ಬಂಧನಕಾಲಾವಧಿಯಲ್ಲಿ ಯೋಜನೆಗಳನ್ನು ರೂಪಿಸುವಾಗ ಈ ಸಮುದಾಯವು ಸ್ವಾವಲಂಬಿಗಳಾಗಿ ಬದುಕಲು ಬೇಕಾದ ಸೂಕ್ತ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು. ಕಾಲಮಿತಿಯಲ್ಲಿಅನುಷ್ಠಾನಗೊಳಿಸಬೇಕು.
6. ಸಾಮೂಹಿಕ ಕೃಷಿ ಮಾಡಲು ಭೂಮಿ ಮತ್ತುಅದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಸರ್ಕಾರ ಒದಗಿಸಿಕೊಟ್ಟು ದೇವದಾಸಿ ತಾಯಂದಿರಿಗೆ ಮತ್ತು ಮಕ್ಕಳಿಗೆ ಸಾಮೂಹಿಕ ಕೃಷಿಯತರಬೇತಿಯನ್ನು ನೀಡಬೇಕು
7. 2018ರಲ್ಲಿ ದೇವದಾಸಿ ಪದ್ಧತಿ ನಿಷೇಧ ನಿರ್ಬಂಧ ಮತ್ತು ಪುನರ್ವಸತಿಕಾಯ್ದೆಕರ್ಡನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಕಾಯ್ದೆಯನ್ನುತಕ್ಷಣಜಾರಿಗೆತರಬೇಕು.
8. ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಂಘಟನೆಗಳು ಒಟ್ಟಾಗಿ ಸಂಪೂರ್ಣ ದೇವದಾಸಿ ಪದ್ಧತಿ ನಿಷೇಧ ಮತ್ತು ಪುನರ್ವಸತಿಗಾಗಿ ಕೆಲಸ ಮಾಡಬೇಕು
9. ಸರ್ಕಾರದಲ್ಲಿ ಅಸ್ತಿತ್ವದಲ್ಲಿರುವ ಪುನರ್ವಸತಿಯೋಜನೆಯಲ್ಲಿಎಲ್ಲ ದೇವದಾಸಿ ತಾಯಂದಿರಿಗೂ ಸಮರ್ಪಕವಾಗಿ ಸೌಲಭ್ಯಗಳನ್ನು ನೀಡಲು ಹಣಕಾಸಿನ ಸಮಸ್ಯೆಕಾಡುತ್ತಿದೆಆದ್ದರಿಂದ ದೇವದಾಸಿ ತಾಯಂದಿರು ಮತ್ತು ಮಕ್ಕಳ ಸಮಗ್ರಅಭಿವೃದ್ಧಿಗಾಗಿ ದೇವದಾಸಿ ತಾಯಂದಿರಅಭಿವೃದ್ಧಿ ನಿಗಮವನ್ನು ಸ್ಥಾಪಿಸಿ ಕಾಲಮಿತಿಯಲ್ಲಿಎಲ್ಲ ದೇವದಾಸಿ ತಾಯಂದಿರಿಗೆ ಸೌಲಭ್ಯಗಳನ್ನು ಒದಗಿಸಿ ಸಮಗ್ರಅಭಿವೃದ್ಧಿಗೆ ಪ್ರಯತ್ನಿಸಬೇಕು
10. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿಅತ್ಯಂತ ಹಿಂದುಳಿದ ಸಮುದಾಯವಾಗಿರುವ ದೇವದಾಸಿ ತಾಯಂದಿರಿಗೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪ ಯೋಜನೆಯ ಹಣವನ್ನು ಮೀಸಲಿಟ್ಟುಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಬೇಕು.